ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1784

ಸದಸ್ಯರ ಹೆಸರು : **ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಉತ್ತರಿಸುವ ಸಚಿವರು : ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 19-03-2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ತೋಟದ ಬೆಳೆಗಳಲ್ಲಿ ಕಂಡುಬರುವ ಕೀಟಬಾಧೆ, ಪೋಷಕಾಂಶಗಳ ಕೊರತೆ, ಔಷಧಗಳ ಸಿಂಪರಣೆಗಳ ಬಗ್ಗೆ ಮಾಹಿತಿ ಒದಗಿಸುವ ಉದ್ದೇಶದಿಂದ ಸರ್ಕಾರ ಪರಿಚಯಿಸಿರುವ "ಇ-ಸ್ಯಾಪ್ (ಎಲೆಕ್ಟ್ರಾನಿಕ್ ಸೊಲ್ಯೂಷನ್ ಫಾರ್ ಅಗ್ರಿಕಲ್ಚರ್ ಪೆಸ್ಟ್) ಮೊಬೈಲ್ ಆ್ಯಪ್ ಸಾಮಾನ್ಯ ರೈತರನ್ನು ತಲುಪುವಲ್ಲಿ ವಿಫಲವಾಗಿದೆ ಎಂಬ ವರದಿ ಸರ್ಕಾರದ ಗಮನಕ್ಕೆ ಬಂದಿದೆಯೇ;	2019-20ನೇ ಸಾಲಿನಲ್ಲಿ ಕೃಷಿ ವಿಶ್ವವಿದ್ಯಾಲಯ, ರಾಯಚೂರು ರವರ ಸಹಭಾಗಿತ್ವದೊಂದಿಗೆ e-SAP (Electronic Solutions Against Agricultural Pests) ತಂತ್ರಾಂಶದ ಅಭಿವೃದ್ಧಿಯನ್ನು ಪ್ರಾರಂಭಿಸಲಾಗಿರುತ್ತದೆ. ಸದರಿ ತಂತ್ರಾಂಶದ ಮೂಲಕ ನೋಂದಾಯಿತ ರೈತರಿಗೆ ತೋಟದ ಬೆಳೆಗಳಲ್ಲಿ ಕಂಡುಬರುವ ಕೀಟಬಾಧೆ, ಪೋಷಕಾಂಶಗಳ ಕೊರತೆ, ಔಷಧಗಳ ಸಿಂಪರಣೆಗಳ ಬಗ್ಗೆ "ಇ-ಸ್ಯಾಪ್" ಮೊಬೈಲ್ ಆ್ಯಪ್ ಮೂಲಕ ಇಲ್ಲಿಯವರೆಗೆ 3946 ಹಳ್ಳಿಗಳಲ್ಲಿ 9588 ಸಂಖ್ಯೆಯ ರೈತರ ತಾಕುಗಳಿಗೆ ಭೇಟಿ ನೀಡಿಲಾಗಿರುತ್ತದೆ. ಇದುವರೆವಿಗೂ 18,699 ಬಾರಿ ಇ-ಸ್ಯಾಪ್ ತಂತ್ರಾಂಶದ ಮೂಲಕ ಸಲಹೆ/ ಸೇವೆಯನ್ನು ನೀಡಲಾಗಿರುತ್ತದೆ. ಹೀಗಾಗಿ ಸದರಿ ಆ್ಯಪ್ ಸಾಮಾನ್ಯ ರೈತರನ್ನು ತಲುಪುವಲ್ಲಿ ವಿಫಲವಾಗಿದೆ ಎಂಬ ವರದಿ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಆ	ರೈತರಿಗೆ ಈ ತಂತ್ರಾಂಶದ ಬಗ್ಗೆ ಅರಿವು ಮೂಡಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;	ರೈತರಿಗೆ ಈ ತಂತ್ರಾಂಶದ ಬಗ್ಗೆ ಅರಿವು ಮೂಡಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ 1. ಕ್ಷೇತ್ರ ಮಟ್ಟದ ಅಧಿಕಾರಿಗಳು ರೈತರ ತಾಕುಗಳಿಗೆ ಭೇಟಿ ನೀಡಿ ತೋಟಗಾರಿಕೆ ಬೆಳೆಗಳಿಗೆ ಕಂಡುಬರುವ ಕೀಟಬಾಧೆ, ಪೋಷಕಾಂಶಗಳ ಕೊರತೆ, ಔಷಧಗಳ ಸಿಂಪರಣೆಗಳ ಬಗ್ಗೆ ರೈತರಿಗೆ ಸ್ಥಳದಲ್ಲಿಯೇ ಮಾಹಿತಿಯನ್ನು ಮುದ್ರಣ ಪ್ರತಿಯ ಮೂಲಕ ನೀಡಲಾಗುತ್ತಿದೆ. 2. ಕೀಟ/ರೋಗಗಳ ಹಾಗೂ ಪೋಷಕಾಂಶಗಳ ಕುರಿತು ತಕ್ಷಣವೇ ಪರಿಹಾರ ದೊರಕದ ಸನ್ನಿವೇಶದಲ್ಲಿ ತಂತ್ರಾಂಶದ ವೇದಿಕೆಯ ತಜ್ಞರುಗಳ ಮೂಲಕ 24 ಗಂಟೆಯೊಳಗೆ ರೈತರಿಗೆ ಸಲಹೆಗಳನ್ನು ನೀಡಲಾಗುತ್ತಿದೆ.

		3. ಈ ತಂತ್ರಾಂಶದ ಬಗ್ಗೆ ಅರಿವು ಮೂಡಿಸುವಲ್ಲಿ ಕೃಷಿ ವಿಶ್ವವಿದ್ಯಾಲಯ, ರಾಯಚೂರು ರವರಿಂದ ಇಲಾಖೆಯ ಅಧಿಕ್ಕಾರಿಗಳಿಗೆ ಇ-ಸ್ಯಾಪ್ ತಂತ್ರಾಂಶದ ಬಳಕೆಯ ಬಗ್ಗೆ ತರಬೇತಿಯನ್ನು ನೀಡಲಾಗಿರುತ್ತದೆ. 4. ಮಾಧ್ಯಮಗಳ ಮೂಲಕ, ಇಲಾಖೆಯ Website ನಲ್ಲಿ, Social Media ಗಳಾದ Twitter ಹಾಗೂ Facebook ನ ಮೂಲಕ ಪ್ರಚಾರ ಮಾಡಲಾಗಿರುತ್ತದೆ. 5. ಸ್ಥಳೀಯ ಪತ್ರಿಕೆಗಳಲ್ಲಿ ಪ್ರಚಾರ ಕೈಗೊಳ್ಳಲಾಗಿರುತ್ತದೆ.
ಇ	ಸದರಿ ತಂತ್ರಾಂಶದಡಿಯಲ್ಲಿ ಬರುವ ತೋಟಗಾರಿಕಾ ಬೆಳೆಗಳ ಕುರಿತು ಮಾಹಿತಿ ನೀಡುವುದು:	1. ತಂತ್ರಾಂಶದಲ್ಲಿ ಒಟ್ಟು 20 ತೋಟಗಾರಿಕೆ ಬೆಳೆಗಳ ಮಾಹಿತಿಯನ್ನು ಅಳವಡಿಸಲಾಗಿರುತ್ತದೆ. ಬೆಳೆಗಳ ವಿವರ ಹೀಗಿರುತ್ತದೆ - ಅಡಿಕೆ, ಬಾಳೆ, ಕಾಳುಮೆಣಸು, ಬದನೆಕಾಯಿ, ಎಲೆಕೊಸು, ಮೆಣಸಿನಕಾಯಿ, ಲಿಂಬೆ, ತೆಂಗು, ಶುಂಠಿ, ದ್ರಾಕ್ಷಿ, ಮಲ್ಲಿಗೆ, ಮಾವು, ಬೆಂಡೆಕಾಯಿ, ಈರುಳ್ಳಿ, ದಾಳಿಂಬೆ, ಆಲೂಗಡ್ಡೆ, ಟೊಮ್ಯಾಟೊ, ಸೌತೆಕಾಯಿ, ಅರಿಶಿಣ, ಕಾಫಿ. 2. ಅಲ್ಲದೇ ಆಂಥೂರಿಯಮ್, ಕ್ಯಾಪ್ಸಿಕಂ, ಗೋಡಂಬಿ, ಸೇವಂತಿಗೆ, ಕೊಕೋ, ಅಂಜೂರ, ಸೀಬೆ, ನೇರಳೆ, ಕರಬೂಜ, ಪಪ್ಪಾಯ, ಗುಲಾಬಿ, ಸುಗಂಧರಾಜ ಮತ್ತು ಕಲಂಗಡಿಗಳ ಮಾಹಿತಿಯನ್ನು ಇ-ಸ್ಯಾಪ್ ತಂತ್ರಾಂಶದಲ್ಲಿ ಅಳಡಿಸಲು ಕ್ರಮವಹಿಸಲಾಗುತ್ತಿದೆ.
ಈ	ಸಮಗ್ರ ತೋಟಗಾರಿಕಾ ಯೋಜನೆಗೆ ಇಲಾಖೆಯಲ್ಲಿ ಹೆಸರು ನೋಂದಾಯಿಸಿಕೊಂಡ ರಾಜ್ಯದ ಒಟ್ಟು ರೈತರ ಸಂಖ್ಯೆ ಎಷ್ಟು?	ಸಮಗ್ರ ತೋಟಗಾರಿಕಾ ಯೋಜನೆಗೆ ಇಲಾಖೆಯಲ್ಲಿ 2020-21 ನೇ ಸಾಲಿನಲ್ಲಿ ಹೆಸರು ನೋಂದಾಯಿಸಿಕೊಂಡ ರಾಜ್ಯದ ಒಟ್ಟು ರೈತರ ಸಂಖ್ಯೆ 1,53,002 ಗಳಾಗಿರುತ್ತದೆ
ಉ	ಸದರಿ ಯೋಜನೆಯಡಿ ಬೆಳಗಾವಿ ಜಿಲ್ಲೆಯಲ್ಲಿ ಹೆಸರು ನೋಂದಾಯಿಸಿಕೊಂಡ ರೈತರ ಸಂಖ್ಯೆ ಎಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು)	ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 8025 ಸಂಖ್ಯೆಯ ರೈತರು ಹೆಸರನ್ನು ನೋಂದಾಯಿಸಿಕೊಂಡಿರುತ್ತಾರೆ. ತಾಲ್ಲೂಕುವಾರು ಮಾಹಿತಿ ಈ ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ	ತಾಲ್ಲೂಕು	ನೋಂದಾಯಿಸಿಕೊಂಡ ರೈತರ ಸಂಖ್ಯೆ
1	ಅಥಣಿ	157
2	ಬೈಲಹೊಂಗಲ	1124
3	ಬೆಳಗಾವಿ	1224
4	ಚಿಕ್ಕೋಡಿ	345
5	ಗೋಕಾಕ್	244

		6	ಹುಕ್ಕೇರಿ	573
		7	ಕಾಗವಾಡ	20
		8	ಖಾನಾಪುರ	467
		9	ಕಿತ್ತೂರು	566
		10	ಮೂಡಲಗಿ	154
		11	ನಿಪ್ಪಾಣಿ	502
		12	ರಾಯಬಾಗ್	465
		13	ರಾಮದುರ್ಗ	682
		14	ಸವದತ್ತಿ	1502
			ಒಟ್ಟು	**8025**

HORTI 183 HGM 2021

(ಆರ್.ಶಂಕರ್)
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು